ಮಿಲಾಂಡಾನ್ ಇವನನ್ನು ಕಂಡು ಗಟ್ಟಿಯಾಗಿಯೇ ಗಹಗಹಸಿದ!

"ಯಾಕೆ... ಯಾಕೆ, ಮತ್ತೆಮತ್ತೆ ಕುಹಕ? ಈ ವ್ಯಂಗ್ಯದ ಇರಿತ?'' ಮುದಿ ರೈತನ ಹೃದಯಕ್ಕೆ ಇರಿದಂತಾಯಿತು.

ಸಂತೆಯಲ್ಲಿ ಗುರುತಿನವನೊಬ್ಬನನ್ನು ನಿಲ್ಲಿಸಿ ತನ್ನ ಮತ್ತದೇ ಪುರಾಣ ಶುರು ಮಾಡಿದಾಗ, ಅವನು ಅಸಹನೆಯಿಂದ ಈ ಹಿರಿಯನನ್ನು ಹೊಟ್ಟೆಗೆ ಬಲವಾಗಿ ಗುದ್ದಿ ನೋಯಿಸಿ ಬಿಟ್ಟ. ಅಷ್ಟೇ ಅಲ್ಲ, "ಹೋಗಲೋ ಕಳ್ಳ ಕೊರಮ... ಬಂದ ಇಲ್ಲಿ!... ಸುಮ್ಮನೆ ತಲೆ ತಿನ್ನೋಕೆ!'' ಎಂದು ಗದರಿ ಅಸಡ್ಡೆಯಿಂದ ಬೆನ್ನು ತಿರುಗಿಸಿ ಹೊರಟುಹೋದ. ಅತೀವ ಯಾತನೆಯಿಂದ ಈ ರೈತ ಮರಗಟ್ಟಿ ನಿಂತ.

ಆದರೂ ಅವನು ತನ್ನ ಪ್ರಯತ್ನ ಬಿಡಲಿಲ್ಲ. ಮಧ್ಯಾಹ್ನ ನಗರದ ಅದೇ ಹೋಟೆಲ್‌ಗೆ ಹೋಗಿ ಕೂತ. ಸ್ವಲ್ಪವೂ ಬೇಸರವಿಲ್ಲದೆ ತನ್ನ ಅದೇ ಹಳೆಯ ಕಥನವನ್ನು ಹೊಸ ಹುರುಪಿನಿಂದ ಬಿಚ್ಚತೊಡಗಿದ.

ಒಬ್ಬ ಸಾಹುಕಾರ ಅವನನ್ನು ಧಿಮಾಕಿನಿಂದ ಹತ್ತಿರ ಕರೆದ. "ಎಲವೋ ಮುದಿಠಕ್ಕ... ನನಗೆ ಗೊತ್ತಿಲ್ವ ನಿನ್ನ ಸುಳ್ಳಿನ ವರಸೆಗಳು? ನಿನ್ನಂಥೋರಿಗೆ ಇವೆಲ್ಲ ಮಾಮೂಲು ಬಿಡು! ಯಾರಯ್ಯ ನಂಬುತ್ತಾರೆ ನಿನ್ನ ಕತೆಗಳನ್ನು? ಹೋಗು ಹೋಗು..." ಎಂದು ಕಠೋರವಾಗಿ ನಿಂದಿಸಿದ.

ಹಾಶ್‌ಕಾಮ್ ತೀರಾ ಪೆಚ್ಚಾಗಿ ಬಿಟ್ಟ. ಆದರೂ ಸೋಲು ಒಪ್ಪಿಕೊಳ್ಳಲು ಇಷ್ಟಪಡದವನಂತೆ ತಡವರಿಸಿ ಹೇಳಿದ... ''ಯಾಕೆ ಸ್ವಾಮಿ ಹೀಗೆಲ್ಲಾ ಹೇಳ್ತೀರಿ? ಪಾಕೆಟ್ ಬುಕ್ ಸಿಕ್ಕಿತಲ್ಲ? ಅದು ನಿಮಗೂ ಗೊತ್ತಲ್ವಾ?''

ಆ ಸಾಹುಕಾರ ಅಬ್ಬರಿಸಿ ನಕ್ಕುಬಿಟ್ಟ... ''ಬಾಯಿ ಮುಚ್ಚು ಖದೀಮ! ಏನು ಅಂದುಕೊಂಡಿದ್ದೀಯೆ ನಮ್ಮನ್ನು? ನಂಬಿಬಿಡುತ್ತೇವೆಯೇ ನಿನ್ನ ಮೋಸದ ನಾಟಕಗಳನ್ನು? ಅಲ್ಲಯ್ಯ, ಪಾಕೆಟ್ ಬುಕ್ ಸಿಗೋದು ಒಬ್ಬನಿಗೆ... ತಗೊಂಡು ಹೋಗಿ ಕೊಡೋನು ಇನ್ನೊಬ್ಬ! ಆಹಾ! ಸೊಗಸಾಗಿವೆ ಕಣಯ್ಯ ನಿನ್ನ ಆಟಗಳು!''

ಮರ್ಮಾಘಾತದಿಂದ ಮುದುಕ ತತ್ತರಿಸಿ ಬಿಟ್ಟ. ಆ ಸಾಹುಕಾರನ ಕೆಟ್ಟ ವ್ಯಂಗ್ಯ ಅರ್ಥವಾಗಿ ಮತ್ತಷ್ಟು ನೊಂದ. "ಅಂದರೆ... ತಾನು ಮೊದಲು ಪಾಕೆಟ್ ಬುಕ್ಕನ್ನು ಅಪಹರಿಸಿ, ಅನಂತರ ವಿಚಾರಣೆ ಆದಮೇಲೆ ಹೆದರಿ, ಮತ್ತಾರಿಂದಲೋ ಹಿಂತಿರುಗಿಸಿದ್ದೇನೆ ಅಂತಲೇ?"

ಈ ಅಭಿಪ್ರಾಯವನ್ನು ವಿರೋಧಿಸಲು ಅವನು ಶಕ್ತಿಮೀರಿ ಪ್ರಯತ್ನಿಸತೊಡಗಿದ. ಆದರೆ, ಅದು ಸ್ವಲ್ಪವೂ ಫಲಿಸಲಿಲ್ಲ. ಸುತ್ತ ಕೂತವರೆಲ್ಲರೂ ಕರ್ಕಶವಾಗಿ ಕೇಕೆ ಹಾಕಿ ನಕ್ಕರು. ಹಾಶ್‌ಕಾಮ್ ಸ್ತಬ್ಧನಾಗಿಬಿಟ್ಟ. ಊಟ ಕೂಡ ಮುಗಿಸಲಾಗಲಿಲ್ಲ. ಅಪಾರ ವೇದನೆ ಮೈದುಂಬಿತು. ನಡುಗುತ್ತಾ ನಿಟ್ಟುಸಿರಿಡುತ್ತಾ ಕತ್ತಲಲ್ಲೆಲ್ಲೋ ಕರಗಿ ಹೋದ.

ವಿಧಿಯಿಲ್ಲದೆ ಮನೆಗೆ ಹಿಂತಿರುಗಿದನಾದರೂ ಅವಮಾನ ಅಣುಅಣುವಾಗಿ ಸುಡುತ್ತಿತ್ತು. ಭರಿಸಲಾಗದ ನೋವಿನಿಂದ ಹೃದಯವೇ ಹೊತ್ತಿಕೊಂಡು ಉರಿಯುತ್ತಿರುವಂತೆ ಭಾಸವಾಯಿತು.

"ಕಡೆಗೂ ಜನರು ನನ್ನನ್ನು ಬೇರೆಯಾಗಿಯೇ ತೀರ್ಮಾನಿಸಿ ಬಿಟ್ಟಿದ್ದಾರೆ! ನಾನು ನಿರಪರಾಧಿ ಎಂಬುದನ್ನು ಅವರೆಲ್ಲರೂ ನಂಬಲು ಸಿದ್ಧವಿಲ್ಲ. ಹಾಗಾದರೆ... ಹಾಗಾದರೆ ನನ್ನ ಪ್ರಾಮಾಣಿಕತೆಯನ್ನು ನಿರೂಪಿಸಲು ಸಾಧ್ಯವೇ ಇಲ್ಲವೇ? ಓ ದೇವರೇ ಏನಿದು ಅನ್ಯಾಯ?"

ಅವನ ಅಂತರಂಗ ಪದೇಪದೇ ಗೋಳಿಟ್ಟಿತು.

ಮುಂದಿನ ದಿನಗಳಲ್ಲಿ ಅವನು ಜನರ ಮುಂದೆ ಹೊಸಹೊಸ ದಿವ್ಯ ಪ್ರಮಾಣಗಳನ್ನೇ ಮಾಡತೊಡಗಿದ. ತನ್ನ ಮಾತುಗಳು ಅತ್ಯಂತ ಪರಿಣಾಮಕಾರಿಯಾಗುವಂತೆ ಮಾಡಲು ಶಕ್ತಿಮೀರಿ ಪ್ರಯತ್ನಿಸುತ್ತಿದ್ದ. ಇವೆಲ್ಲವೂ ತನ್ನ ಏಕಾಂತದ ಗಳಿಗೆಗಳಲ್ಲಿ ಅವನೇ ಸೃಷ್ಟಿಸಿಕೊಂಡ